ಕರ್ನಾಟಕ ಸರ್ಕಾರ
(ಪಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ ಃ 140/2015**

ಪ್ರಾಸಾ- 16 ಚಾಸಾ- 20

| | | |
|---|---|---|
| ಸಾಕ್ಷಿದಾರರ ಹೆಸರುಃ | ಃ | ಬಿ ಎಂ ಶಿವಕುಮಾರ್ |
| ತಂದೆಯ ಹೆಸರುಃ | ಃ | ಮಲಿಯಪ್ಪ |
| ವಯಸ್ಸುಃ | ಃ | 66 ವರ್ಷ |
| ಉದ್ಯೋಗಃ | ಃ | ನಿವೃತ್ತ ಜಿಲ್ಲಾ ವಿಮಾಧಿಕಾರಿ, ಕೆ ಜಿ ಐ ಡಿ, ಹಾಸನ |
| ವಾಸಃ | ಃ | ಹಾಸನ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕಃ 01-09-2023ಃ**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು 2011 ರಿಂದ 2016 ರ ತನಕ ಹಾಸನ ಜಿಲ್ಲಾ ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯಲ್ಲಿ ಜಿಲ್ಲಾ ವಿಮಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ಜೂನ್ 2014 ರಲ್ಲಿ ಸಿ.ಆರ್. ಮಂಜುನಾಥ್ ಎನ್ನುವವರ ವಿಮಾ ಪಾಲಿಸಿಗೆ ಸಂಬಂಧಪಟ್ಟ ವಿವರಗಳನ್ನು ಕೋರಿ ನನಗೆ ಹಾಸನ ಲೋಕಾಯುಕ್ತ ಪೊಲೀಸರಿಂದ ಪತ್ರ ಬಂದಿರುತ್ತದೆ. ಸದರಿ ಕೋರಿಕೆಯಂತೆ ನಾನು ದಿನಾಂಕ 16.06.2014 ರಂದು ಸದರಿ ಸಿ.ಆರ್. ಮಂಜುನಾಥ್ ರವರಿಗೆ ಸಂಬಂಧಪಟ್ಟ ವಿಮಾ ಪಾಲಿಸಿ ವಿವರಗಳನ್ನು ಲೋಕಾಯುಕ್ತ ಪೊಲೀಸರಿಗೆ ನೀಡಿರುತ್ತೇನೆ. ಈಗ ತೋರಿಸಿದ ದಾಖಲೆಯು ಲೋಕಾಯುಕ್ತ ಪೊಲೀಸರಿಗೆ ನೀಡಿರುವ ಪತ್ರದ ನಕಲು ಆಗಿದ್ದು ಅದನ್ನು ನಮ್ಮ ಕಛೇರಿಯಲ್ಲಿ ಸ್ವೀಕರಿಸಿದ ಬಗ್ಗೆ ಅದರಲ್ಲಿ ನಮ್ಮ ಕಛೇರಿಯ ಮೊಹರು ಇರುತ್ತದೆ. ಸದರಿ ಪತ್ರವನ್ನು ನಿಶಾನೆ ಪಿ.100 ಎಂದು ಗುರುತಿಸಲಾಗಿದೆ. ಸದರಿ ಕೋರಿಕೆಯಂತೆ ನಾನು ಲೋಕಾಯುಕ್ತ ಪೊಲೀಸರಿಗೆ ಮಾಹಿತಿಯನ್ನು ಪತ್ರದ ಮೂಲಕ ನೀಡಿರುತ್ತೇನೆ. ಈಗ ತೋರಿಸಿದ ದಾಖಲೆಯು ಸದರಿ ಪತ್ರವಾಗಿದ್ದು ಅದನ್ನು ನಿಶಾನೆ ಪಿ.101

ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ.101(ಎ) ಎಂದು ಗುರುತಿಸಲಾಗಿದೆ. ನಿಶಾನೆ ಪಿ.101 ಪತ್ರದ ಜೊತೆಯಲ್ಲಿ ಸಂಬಂಧಪಟ್ಟ ದಾಖಲೆಗಳ ಯಥಾ ನಕಲುಗಳನ್ನು ನಾನು ಲೋಕಾಯುಕ್ತ ಪೊಲೀಸರಿಗೆ ಕಳುಹಿಸಿಕೊಟ್ಟಿರುತ್ತೇನೆ. ಈಗ ತೋರಿಸಿದ 20 ದಾಖಲೆಗಳ ಸದರಿ ದಾಖಲೆಗಳಾಗಿದ್ದು, ಸದರಿ ದಾಖಲೆಗಳನ್ನು ಅನುಕ್ರಮವಾಗಿ ನಿಶಾನೆ ಪಿ.101(1) ರಿಂದ ನಿಶಾನೆ ಪಿ.101(20) ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ- ಆರೋಪಿ ಪರ ಶ್ರೀ ಸಿ.ಎನ್.ವಿ. ವಕೀಲರಿಂದಃ-**

ಕರ್ನಾಟಕ ಸರ್ಕಾರ ವಿಮೆಯಲ್ಲಿ ವಿಮಾ ಪಾಲಿಸಿ ಹಣದ ಬಗ್ಗೆ ವಿಮಾ ಕಂತು ಸಂಬಂಧಪಟ್ಟ ನೌಕರನ ಸಂಬಳದಿಂದ ಪ್ರತಿ ತಿಂಗಳು ಕಡಿತಗೊಳ್ಳುತ್ತದೆ ಎಂದರೆ ಸರಿ. ಕರ್ನಾಟಕ ಸರ್ಕಾರ ವಿಮಾ ಪಾಲಿಸಿಯ ಮೇಲೆ ಸಾಲ ಪಡೆಯಬಹುದು ಎಂದರೆ ಸರಿ. ಸದರಿ ಸಾಲದ ಹಣವನ್ನು ಸಂಬಂಧಪಟ್ಟ ನೌಕರ 30 ರಿಂದ 40 ಮಾಸಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕಾಗುತ್ತದೆ ಎಂದರೆ ಸರಿ. ಸದರಿ ಸಾಲದ ಹಣದ ಕಂತಿನ ಹಣವು ನೌಕರನ ಮಾಸಿಕ ವೇತನದಿಂದ ಕಡಿತವಾಗುತ್ತದೆ. ಸಾಲದ ಬಗ್ಗೆ ಅಸಲು ಹಣದ ಮಾಸಿಕ ಕಂತುಗಳ ಪಾವತಿ ತೀರುವಳಿ ಆದ ನಂತರ, ನಂತರದ 8 ತಿಂಗಳುಗಳಲ್ಲಿ ಬಡ್ಡಿ ಹಣವನ್ನು ಮಾಸಿಕ ಸಮಾನ ಕಂತುಗಳಲ್ಲಿ ಮಾಸಿಕ ವೇತನದಿಂದ ಕಡಿತಗೊಳಿಸಿ ಪಾವತಿ ಮಾಡಲಾಗುತ್ತದೆ ಎಂದರೆ ಸರಿ.

2) ನಿಶಾನೆ ಪಿ.101ರ ಪ್ರಕಾರ, ಸಿ.ಆರ್.ಮಂಜುನಾಥ್ ರವರು ಕೆಜಿಐಡಿ ಸಾಲ ರೂ.1,50,000/- ಪಡೆದಿರುತ್ತಾರೆ ಎಂದರೆ ಸರಿ. 2013ರಲ್ಲಿ ಸದರಿ ಸಾಲದ ಅಸಲು ಹಣ ಪೂರ್ತಿಯಾಗಿ ಮರುಪಾವತಿಯಾಗಿಲ್ಲ ಮತ್ತು ಬಡ್ಡಿಯ ಹಣ ಸಹ ಪಾವತಿಯಾಗಿಲ್ಲ ಎಂದರೆ ಸರಿ.

**ಮರು ವಿಚಾರಣೆಃ** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ**
**ಸ್ಪೆಷಲ್ ನ್ಯಾಯಾಧೀಶರು, ಹಾಸನ.**